ನಿಂತಿರಲಿ. ಲಾರಿಗಳು ಬಂದ ಮೇಲೆ ಕಸ ಡಂಪ್ ಮಾಡುವಿರಂತೆ. ಆ ಆಕ್ಸಿಡೆಂಟ್ ಕೇಸು ಬುಕ್ಕಾಗದಂಗೆ ಬೇರೆ ನೋಡ್ಕೋಬೇಕು' ಅಂದವನೇ ಗಡಿಬಿಡಿಯಲ್ಲಿ ಕಾರಿನ ಬಾಗಿಲು ತೆರೆದ. ಏದುಸಿರು ಬಿಡುತ್ತಾ ಬಂದಿದ್ದ ಮಾದೇವ 'ಅಣ್ಣಾ, ನಮ್ಮೌವ್ವನಿಗೆ ಹುಶಾರಿಲ್ಲ. ಕಷ್ಟದಲ್ಲಿ ಅವಳೆ. ನಾನು ಊರಿಗೆ ಹೋಗಲೇಬೇಕು. ನನ್ನ ಕೂಲಿ ಕೊಡಿ' ಅಂತ ಕೇಳಿಕೊಂಡ. ಕಾರಿನೊಳಗೆ ಕೂರಬೇಕಿದ್ದ ಪಿ.ಎ. ಹಿಮ್ಮರಳಿ 'ಕೂಲಿ? ಹೇಳಿದ್ನಲ್ಲ ಗ್ರಾಂಟು ಬರ್ಬೇಕು ಅಂತ. ಅಷ್ಟಕ್ಕೂ ನೀನು ಯಾರು? ನಿನ್ನ ನೋಡೇ ಇಲ್ವಲ್ಲಾ?'ಅಂತ ಪ್ರಶ್ನಿಸಿದ.

'ನಾನು ಮಾದೇವ. ಮೂರು ತಿಂಗಳಿಂದ ನಾಗಲಿಂಗಣ್ಣನ ಆಟೋದಲ್ಲಿ ಕೆಲ್ಸ ಮಾಡ್ತಿದ್ದೀನಿ. ಅನುಮಾನ ಇದ್ರೆ ಆ ಅಣ್ಣನ್ನೇ ಕೇಳಣ್ಣಾ' ಅಂದ.

ಪಿ.ಎ. ಸುತ್ತುವರಿದಿದ್ದ ಡ್ರೈವರುಗಳ ಕಡೆ ನೋಡುತ್ತ 'ಯಾರು ನಾಗಲಿಂಗಣ್ಣ? ಈ ಹುಡುಗ ಹೇಳ್ತಿರೋದೇನು?' ದನಿ ಎತ್ತಿ ಕೇಳಿದ. ನಾಗಲಿಂಗಸ್ವಾಮಿ ಆ ಗುಂಪಿನಲ್ಲಿ ಕಾಣಲಿಲ್ಲ. ಮಾದೇವ ಕಾತರದಿಂದ ಕಣ್ಣಾಡಿಸಿದ. ಅವನ ಸುಳಿವು ದೊರೆಯಲಿಲ್ಲ. ಇನ್ನೂ ದೂಳಿನಲ್ಲೇ ಮೊಬೈಲ್ ಹಿಡಕೊಂಡು ಕೂತುಬಿಟ್ಟನಾ? ಆಟೋ ಟ್ರಾಫಿಕ್‌ನಲ್ಲಿ ಸಿಕ್ಕಿಕೊಂಡಾಗ, ಸಿಗ್ನಲ್‌ನಲ್ಲಿ ನಿಂತಾಗ ಮೊಬೈಲ್ ನೋಡುವ ಚಟದವನು ನಾಗಲಿಂಗಣ್ಣ. ಅವನನ್ನೇ ಕರೆದು ತಂದು ಹೇಳಿಸಬೇಕು ಅಂದುಕೊಂಡ ಮಾದೇವ ಆಟೋ ನಿಂತಿದ್ದ ಕಡೆ ಓಡಲು ತಿರುಗಿದ. ಅಷ್ಟರಲ್ಲಿ ಪಿ.ಎ. 'ಯಾವ ವಾರ್ಡಿನಿಂದ ಬರ್ತಾ ಇದ್ದೀಯಾ ನೀನು' ಅಂತ ಕೇಳಿದ. ಮತ್ತೆ ನಿಂತ ಮಾದೇವನಿಗೆ ತಕ್ಷಣಕ್ಕೆ ಅದು ಯಾವ ವಾರ್ಡು ಅಂತ ಹೊಳೆಯಲಿಲ್ಲ. ಗಾಬರಿಯಲ್ಲಿ ತಡಬಡಿಸಿದ. ಆದರೆ, ಚುರುಕಾಗಿ 'ನಾನು ಕೆಲ್ಸ ಮಾಡ್ತಿರೋದು ದಿಟ ಕನಣ್ಣ' ಅಂತ ತನ್ನ ಕಸದ ಕೈ ಕಡೆ, ಪ್ಯಾಂಟು ಕಡೆ, ಬೂಟುಗಳ ಕಡೆ ಕೈ ಆಡಿಸಿ ನಿವೇದಿಸಿಕೊಂಡ. ಪಿ.ಎಗೆ ಒಮ್ಮೆಗೆ ರೇಗಿತು. ಆ ಮೇಸ್ತ್ರಿ ಸಣ್ಣ ಪುಟ್ಟದ್ದಕ್ಕೆಲ್ಲ ಪಿ.ಎ. ಮೇಲೆ ರೇಗಿದರೆ, ಪಿ.ಎ ಬಂದು ಈ ಕೈಯಾಳಿನ ಮೇಲೆ ಆ ರೋಷವನ್ನೆಲ್ಲಾ ಸುರಿದು ತೀರಿಸಿಕೊಳ್ಳುವ ಹುಂಬುತನದವನು. ಆ ರಭಸದಿಂದಲೇ ಸೀಟು ಮೇಲಿದ್ದ ರಿಜಿಸ್ಟರನ್ನು ತೆಗೆದು ಹಾಳೆಗಳನ್ನೆಲ್ಲ ಪಟಪಟನೆ ತಿರುವಿ 'ಯಾವ ಮಾದೇವನು ಇಲ್ಲ ಗೀದೇವನು ಇಲ್ಲ. ಇದೇನು ಧರ್ಮಛತ್ರನಾ? ಹೋಗಯ್ಯ ಹೋಗು' ಅಂತ ಕತ್ತು, ಕೈ ಕುಣಿಸಿದ. ಆ ಕುಣಿತದ ಜೋರಿಗೆ ಕೊರಳಿನ ಚಿನ್ನದ ಹಗ್ಗಸರ ಅತ್ತಿತ್ತ ವಾಲಾಡಿತು. ಬಲಗೈಲಿದ್ದ ಚಿನ್ನದ ಕಡಗವನ್ನು ಹಿಂದಕ್ಕೆ ಸರಿಸುತ್ತಾ ದಢಾರನೆ ಕಾರಿನ ಬಾಗಿಲು ಹಾಕಿ ಹೊರಟೇಬಿಟ್ಟ.

ಮಾದೇವ, 'ಮೇಸ್ತ್ರಿ ನನ್ನ ಕೂಲಿ ಕೊಟ್ಟೋಗು' ಅಂತ ಕಿರುಚಿದ. ಮುಂದೇನಾಯಿತೋ ತಿಳಿಯಲಿಲ್ಲ. ಅಷ್ಟರಲ್ಲಿ ನಾಗಲಿಂಗಸ್ವಾಮಿ ಆ ಕಡೆಯಿಂದ ಓಡಿ ಬಂದ. ಅವನ ಕಂಡ ಕೂಡಲೇ ಇವನ ದೇಹ ಕಂಪಿಸಿತು. 'ನಾನು ಲೆಕ್ಕದಲ್ಲೂ ಇಲ್ವಂತೆ, ಬುಕ್ಕಿನಲ್ಲೂ ಇಲ್ವಂತೆ. ಮೂರು ತಿಂಗಳಿಂದ ಹೊಟ್ಟೆಬಟ್ಟೆ ಕಟ್ಟಿ ಕಸ ಬಾಚಿದ್ದೀನಿ. ಒಂದು ಪೈಸೆ ನನ್ಗೆ ಕೊಟ್ಟಿಲ್ಲ. ಇದ್ಕೆಲ್ಲ ನೀನೇ ಕಾರಣ. ನನ್ನ ಕೂಲಿ ಕೊಡಿಸು. ನಾನು ಊರಿಗೆ ಹೋಗಬೇಕು' ಅಂತ ಅಬ್ಬರಿಸಿದ.

ಗಂಟು ಮುಖದ ನಾಗಲಿಂಗಸ್ವಾಮಿ ಈಗ ದಿಟವಾಗಿ ಬೆಚ್ಚಿದ. ಮಾದೇವನ ಇಂಥ ಅವತಾರವ ಅವನು ನೋಡಿದ್ದಿಲ್ಲ. ಮಾದೇವ ಹೇಳುತ್ತಿರೋದೆಲ್ಲ ದಿಟವೇ– 'ಹೂನಪ್ಪ, ನನ್ನ ಆಟೋಕ್ಕೆ ನಿನ್ನ ಸೇರಿಸಿಕೊಂಡಿದ್ದ ವಿಷಯವ ಹೇಳ್ತಾನೆ ಬಂದೆ. ಅವರು ಲೆಕ್ಕಕ್ಕೆ ಸೇರಿಕೊಂಡವ್ರೆ ಅಂತ ನಂಬಿಬುಟ್ಟೆ. ನಾನು ಹ್ಯಾಮಾರಿಬುಟ್ಟೆ. ತಪ್ಪಾಯ್ತಪ್ಪಾ' ಅಂತ ಮಾದೇವನ ಹೆಗಲ ಮೇಲೆ ಕೈಹಾಕಿ ಸವರಿದ. ಮಾದೇವ ಅವನ ಕೈ ಅತ್ತ ತಳ್ಳಿ 'ನನ್ಗೆ ಸಮಾಧಾನ ಬ್ಯಾಡ. ಕೂಲಿ ಕೊಡಿಸು. ಇವ್ಯಾವೂ ಬ್ಯಾಡ' ಎಂದವನೇ ಎಡ, ಬಲ ಬೂಟುಗಳನ್ನು ಕಳಚಿ ತೂರಿದ. ಚಿಕ್ಕದು ದೊಡ್ಡದಿದ್ದ ಅವು ಕಾರು ದೂಳೆಬ್ಬಿಸಿ ಬಿಟ್ಟು ಹೋದ ದೂಳೊಳಗೆ ತಮ್ಮ ಶಕ್ತ್ಯಾನುಸಾರ ಹಾರಿ ಬಿದ್ದವು.

ಶಿವ, ಮಾದೇವನ ಬಳಿಗೆಂದು ಮುಂದೆ ಬಂದವನು ಅವನ ಕೆಂಗಣ್ಣು ನೋಡಿ ಹಂಗೇ ನಿಂತ. ಡ್ರೈವರ್ ನಾಗಲಿಂಗಸ್ವಾಮಿ ಇನ್ನೂ ಆನ್‌ನಲ್ಲಿಯೇ ಇದ್ದ ಮೊಬೈಲ್ ಅನ್ನು ಪಟ್ಟಂತ ಅದುಮಿ ನಿಲ್ಲಿಸಿ, ತನ್ನ ಸಹಪಾಠಿಗಳ ಸುತ್ತ ಅಸಹಾಯಕನಾಗಿ ಕಣ್ಣು ಹಾಯಿಸಿದ. ಅವರೆಲ್ಲರೂ ಸಮೂಹ ಸನ್ನಿಗೆ ಒಳಗಾದವರಂತೆ ಮಾದೇವನ ಸಿಟ್ಟು, ಸಂಕಟ, ಕಂಪನ, ಅಸಹಾಯಕತೆಗೆ ಋಜುವಾತುಗಳಾಗಿದ್ದರು! ●